ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಇನ್ನೆರಡು ದಿವಸದಲ್ಲಿ ಖಂಡಿತ ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು: ಆಯಿತು.

ಶ್ರೀ ಆರ್.ವಿ. ದೇವರಾಜ್ ಅಲ್ಲಿ ಬಸ್‌ಸ್ಟ್ಯಾಂಡ್ ಬಹಳ ಮುಖ್ಯ.

ಅಧ್ಯಕ್ಷರು: ಆಯಿತು, ಎರಡು ದಿವಸದಲ್ಲಿ ಕೊಡಿಸುತ್ತಾರೆ. ಇದು held over ಆಯಿತು. ಶ್ರೀ ಹೆಚ್.ಎಸ್. ಪ್ರಕಾಶ್ ಕೇಳಿ. ಅವರು ಇಲ್ಲ. ಶ್ರೀ ಕೆ.ಎಂ. ಶಿವಲಿಂಗೇಗೌಡರು ಕೇಳಿ.

2) **ವಿಷಯ:** ಅರಸೀಕೆರೆ ತಾಲ್ಲೂಕಿನ ಗಂಡಸಿ ಹೋಬಳಿಯ ಪೊಲೀಸ್ ಠಾಣೆಗೆ ಕಲ್ಲುತೂರಾಟ ನಡೆಸಿ ಜಖಂಗೊಳಿಸುವುದಾಗಿ ಗಾಳಿಸುದ್ದಿ ಹಬ್ಬಿಸಿದ್ದು, ಈ ಗಾಳಿಸುದ್ದಿಗೆ ಕಾರಣರಾದವರ ವಿರುದ್ಧ ಕ್ರಮ ಜರುಗಿಸುವ ಬಗ್ಗೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಇನ್ನೂ ಉತ್ತರ ಬಂದಿಲ್ಲ. ಈ Question star ಆಗುವುದಿಲ್ಲ. 80 ಪ್ರಶ್ನೆ ಹಾಕಿದರೂ ಒಂದು ಪ್ರಶ್ನೆ ಕೂಡ Starred Question ಇಲ್ಲ. ಈ ರೀತಿಯಲ್ಲಿ ಕೇಳಿ ಸ್ವಲ್ಪ ವಿಷಯವನ್ನು ತೆಗೆದುಕೊಳ್ಳೋಣ ಎಂದರೆ ಉತ್ತರ ಬಂದಿಲ್ಲ.

ಅಧ್ಯಕ್ಷರು: ಇದಕ್ಕೂ ಉತ್ತರ ಬಂದಿಲ್ಲ. ಇಲ್ಲದಿದ್ದರೆ ಇದಕ್ಕೆ ಉತ್ತರವನ್ನು ಒಂದೆರಡು ದಿವಸದಲ್ಲಿ ತರಿಸಿಬಿಡುತ್ತೇನೆ. ಶ್ರೀ ಎನ್.ಹೆಚ್. ಕೋನರೆಡ್ಡಿ ಕೇಳಿ.

3) **ವಿಷಯ:** ಪ್ಯಾಕೇಜ್ ಟೆಂಡರ್ ಪದ್ಧತಿಯನ್ನು ರದ್ದುಪಡಿಸಿ ಒಂದು ಕಾಮಗಾರಿ ಅಂದಾಜು ಪಟ್ಟಿಗೆ ಅನುಗುಣವಾಗಿ ಕೆ.ಟಿ.ಟಿ.ಪಿ ನಿಯಮಗಳನ್ವಯ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಬಗ್ಗೆ.

ಶ್ರೀ ಎನ್.ಹೆಚ್. ಕೋನರೆಡ್ಡಿ: ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರದ ನಗರಾಭಿವೃದ್ಧಿ, ಸಣ್ಣ ನೀರಾವರಿ, ಲೋಕೋಪಯೋಗಿ ಬೃಹತ್ ನೀರಾವರಿ ಇನ್ನು ಮುಂತಾದ ಇಲಾಖೆಗಳ ಕಾಮಗಾರಿಗಳನ್ನು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ package tender system ಮಾಡುವುದಕ್ಕೆ ಹೊರಟಿದ್ದಾರೆ. ಈಗಾಗಲೇ ಆರ್ಎಂಎಸ್ ಮತ್ತು ನಗರೋತ್ಥಾನ ಯೋಜನೆಯಲ್ಲಿ ಕಾಮಗಾರಿಗಳು ನಡೆದಿವೆ. ಅಲ್ಲಿ sub contract ಕೊಡುತ್ತಿದ್ದು, ಬಹಳ ಕಳಪೆ ಮಟ್ಟದ ಕಾಮಗಾರಿಗಳು ಆಗಿವೆ. ಮತ್ತೇ ಆ ಸಾಹಸಕ್ಕೆ ಈ ಸರ್ಕಾರ ಕೂಡ ಕೈ ಹಾಕುತ್ತಿದೆ. ಅದು ಆಗದ ಹಾಗೆ ನೋಡಬೇಕು. ಜಿಲ್ಲಾ ಮಟ್ಟದಲ್ಲಿ ಟೆಂಡರ್ ಆಗುವಂತಹ ಪದ್ಧತಿಯಾಗಬೇಕು.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರ ಹೇಳಿ.

ಶ್ರೀ ಎನ್.ಹೆಚ್. ಕೋನರೆಡ್ಡಿ: ಇದಕ್ಕೆ ಉತ್ತರ ಇನ್ನೂ ಬಂದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಇದಕ್ಕೆ ಉತ್ತರ ಇನ್ನೂ ಬಂದಿಲ್ಲ, ಉತ್ತರ ತರಿಸಿಕೊಡುತ್ತೇನೆ.

ಅಧ್ಯಕ್ಷರು: ಆಯಿತು. ಉತ್ತರ ತರಿಸಿ ನಾಳೆ ಕೊಡಿಸುತ್ತೇನೆ. ದಯವಿಟ್ಟು Senior Members ಮೂರ್ನಾಲ್ಕು ಜನ ಇಲ್ಲಿಯೇ ಇದ್ದೀರಿ. ಅವರು ಹೇಳುವುದರಲ್ಲೂ ಕೂಡ ಒಂದು ಅರ್ಥವಿದೆ. ಹಿಂದೆಲ್ಲ ನಗರೋತ್ಥಾನ ಕಾರ್ಯಕ್ರಮದಲ್ಲಿ contract ಕೊಟ್ಟು ಕೊಳೆಯುತ್ತಾ ಬಿದ್ದಿವೆ. ಅದನ್ನು ಗಮನದಲ್ಲಿಟ್ಟುಕೊಳ್ಳಿ. ಈಗ ಜಿ.ಹೆಚ್. ಶ್ರೀನಿವಾಸ್ ಕೇಳಿ. ಅವರು ಇಲ್ಲ. ಶ್ರೀ ಎಸ್. ಸುರೇಶ್ ಕುಮಾರ್ ಕೇಳಿ.

ಶ್ರೀ ಜಿ.ಹೆಚ್. ಶ್ರೀನಿವಾಸ್: ಮಾನ್ಯ ಅಧ್ಯಕ್ಷರೆ, ನಾನು ಬಂದಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಶ್ರೀನಿವಾಸ್ ಇದ್ದಾರೆ.

ಶ್ರೀ ಎನ್.ಹೆಚ್. ಕೋನರೆಡ್ಡಿ: ದಯವಿಟ್ಟು ನಾಳೆ ಇದು ಚರ್ಚೆಯಾಗಬೇಕು.

ಅಧ್ಯಕ್ಷರು: ಆಯಿತು, ಈಗ ಡಿಮ್ಯಾಂಡ್‌ಗಳನ್ನು ಎಲ್ಲಾ ಹಾಕಿದ್ದೇನೆ. ಯಾವ ಬೇಡಿಕೆ ಮೇಲೆ ತೆಗೆದುಕೊಂಡು ನೀವು ಮಾತನಾಡುವುದಕ್ಕೆ ಅವಕಾಶ ಇದೆ. ದಯವಿಟ್ಟು ಅದರ ಅವಕಾಶವನ್ನು ಉಪಯೋಗಿಸಿಕೊಂಡು ಇಲಾಖೆ ಮೇಲೆ ಬೆಳಕು ಚೆಲ್ಲಿ. ಇದು ಎಲ್ಲರಿಗೂ ಅನ್ವಯವಾಗುವಂತಹ ವಿಚಾರ.

1. ವಿಷಯ: ತರೀಕೆರೆ ತಾಲ್ಲೂಕು, ಲಕ್ಕವಳ್ಳಿ ಹೋಬಳಿ, ಕೆಂಚಿಕೊಪ್ಪ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮನೆಗಳಿಗೆ ಫಾರಂ 9 ಹಾಗೂ 11 ನೀಡದಿರುವುದರಿಂದ ಗ್ರಾಮಸ್ಥರಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಜಿ.ಹೆಚ್. ಶ್ರೀನಿವಾಸ್ (ತರೀಕೆರೆ): ಮಾನ್ಯ ಅಧ್ಯಕ್ಷರೆ, ತರೀಕೆರೆ ತಾಲ್ಲೂಕಿನಲ್ಲಿ ಲಕ್ಕವಳ್ಳಿ ಹೋಬಳಿ, ಕೆಂಚಿಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 1961ರಿಂದ ಮುಳುಗಡೆ ಪ್ರದೇಶದಿಂದ ಬಂದು ಅಲ್ಲಿ ವಾಸವಾಗಿದ್ದಾರೆ. ಇವತ್ತಿಗೂ ಅವರಿಗೂ ಫಾರಂ ನಂ. 9 ಹಾಗೂ 11 ಕೊಡದೇ ಇರುವುದರಿಂದ ಅವರಿಗೆ ಯಾವುದೇ ವ್ಯವಹಾರಗಳನ್ನು ಮಾಡುವುದಕ್ಕೆ ಅಗುತ್ತಿಲ್ಲ. ಅದಕ್ಕೋಸ್ಕರ ಇಡೀ ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟವರೆಲ್ಲಾ ಚುನಾವಣೆಯನ್ನು ಬಹಿಷ್ಕಾರ ಮಾಡಿದ್ದಾರೆ.

ಅಧ್ಯಕ್ಷರು: ಈಗ ತಾವು ಒಂದು ಕೆಲಸ ಮಾಡಿ, ಇದಕ್ಕೆ ಉತ್ತರ ಬಂದಿದೆಯೇ? ಮಾನ್ಯ ಸಚಿವರು ಇಲ್ಲೇ ಇದ್ದಾರಲ್ಲಾ, ಉತ್ತರ ಹೇಳಿ.

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಉತ್ತರ ಇಲ್ಲ, ಮಾನ್ಯ ಶ್ರೀನಿವಾಸ್‌ರವರ ಪತ್ರ ಈಗ ನನಗೆ ಬಂದಿದೆ. ನಾನು ಈ ಬಗ್ಗೆ ವಿವರಗಳನ್ನು ನೋಡಿ, ಏನು ಕ್ರಮ ವಹಿಸಬೇಕೆಂಬುದನ್ನು ನೋಡಿ ಮಾಡುತ್ತೇನೆ, ಅಗತ್ಯ ಬಿದ್ದರೆ ಮಾನ್ಯ ಶಾಸಕರು ಜೊತೆಗೆ ಚರ್ಚೆ ಮಾಡುತ್ತೇನೆ.

ಅಧ್ಯಕ್ಷರು: Ok. ಮಾನ್ಯ ಎಸ್. ಸುರೇಶ್‌ಕುಮಾರ್‌ರವರೆ, ಹೇಳಿ.